(ಶ್ರೀ ಎಂ. ಎನ್. ನಾಗನೂರ್)

ಆಗಿ ಹೇಳಬೇಕಾದರೆ, ಒಂದು ಕೋಟಿ ರೂಪಾಯಿ ಯೋಜನೆಯನ್ನು ಇಡಿಯ ಹೈದರಾಬಾದ್ ಭಾಗಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಲು ತಯಾರಿಸಿದೆ.

Construction of Pattadakal Bridge.

*Q—657. Sri M. R. PATTANA SHETTY (Guledgud).—

Will the Government be pleased to state :—

(*a*) whether the plan and estimate for the construction of Pattadakal bridge situated on the road between Badami Station and Gudur have received the final approval of the Central Government ;

(*b*) if so, when the work will be commenced ?

A.—Sri H. M. CHANNABASAPPA (Minister for Public Works and Electricity).—

(*a*) Plans and cstimates already prepared are under further technical scrutiny. The State Government itself is competent to sanction the estimate.

(*b*) After sanction is accorded to plans and estimates.

ಶ್ರೀ ಎಂ. ಆರ್. ಪಟ್ಟಣಶೆಟ್ಟಿ.—ಇತಿಹಾಸ ಪ್ರಸಿದ್ಧವಾದ ಈ ರಸ್ತೆಯನ್ನು ಮಾಡಿಸಲು 14 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ 4 ವರ್ಷವಾಯಿತು. ಇನ್ನೂ ಈ ಸೇತುವೆ ಬಗ್ಗೆ ಪ್ಲಾನು ಎಷ್ಟಿಮೇಟು ಗಳನ್ನು ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಇದನ್ನು ಬೇಗ ಪೂರೈಸುತ್ತೀರಾ ?

†ಶ್ರೀ ಎಂ. ಎಚ್. ನಾಗನೂರ್.—ಸರ್ಕಾರದವರು ಬಹಳ ಆತುರತೆಯಿಂದ ಈಗಾಗಲೇ 11 ಲಕ್ಷ 99 ಸಾವಿರ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಿದ್ದಾರೆ. ಈಗ ಕೆಲವು ದಿವಸಗಳ ಹಿಂದೆ ಇದನ್ನು ಚೀಫ್ ಎಂಜಿನಿಯರಿಗೆ ಮತ್ತು ಸೂಪರಿಂಟೆ ರ್ಡೆಟಿಂಗ್ ಎಂಜಿನಿಯರಿಗೆ ಅವರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಇದರ ಅಂದಾಜ ಎಷ್ಟು ?

ಶ್ರೀ ಎಂ. ಎಚ್. ನಾಗನೂರ್.—11 ಲಕ್ಷ 99 ಸಾವಿರದ 600 ರೂಪಾಯಿಗಳು.

ಶ್ರೀ ಎ. ಜೆ. ದೊಡ್ಡಮೇಟಿ.—ಎಷ್ಟು ದಿವಸಗಳಿಂದ ಇದು ಪರಿಶೀಲನೆಯಲ್ಲಿದೆ ?

ಶ್ರೀ ಎಂ. ಎಚ್. ನಾಗನೂರ್.—ಎಷ್ಟು ದಿವಸ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮೊನ್ನೆತಾನೆ ಅಂದಾಜನ್ನು 16-4-59 ರಲ್ಲಿ ತಯಾರಿಸಿದ್ದೇವೆ.

ಶ್ರೀ ಎ.ಜೆ. ದೊಡ್ಡಮೇಟಿ.—ಈ ಅಂದಾಜ ತಯಾರು ಮಾಡಲು ಎಷ್ಟು ದಿವಸ ಹಿಡಿಯಿತು ?

ಶ್ರೀ ಎಂ. ಎಚ್. ನಾಗನೂರ್.—ಆಗಲೇ ಉತ್ತರ ಹೇಳಿದೆ.

ಒಬ್ಬ ಸದಸ್ಯರು.—ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕಿಲ್ಲವೇ ?

ಶ್ರೀ ಎಂ. ಎಚ್. ನಾಗನೂರ್.—ಇದಕ್ಕೆ ಇಂಡಿಯಾ ಸರ್ಕಾರದ ಅನುಮತಿ ಬೇಕಿಲ್ಲ. 25000 ರೂಪಾಯಿ ಗಳ ಒಂದು ಅಂದಾಜು ಮಾಡಿ ಮೊನ್ನೆತಾನೆ ಮಾನ್ಯ ಮಂತ್ರಿಗಳು ಹೋಗಿ ಅಡಿಗಲ್ಲು ಹಾಕಿ ಬಂದಿದ್ದಾರೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಈ ರಸ್ತೆಗೆ ಹಣ ಕೊಡುವ ವರು ಭಾರತ ಸರ್ಕಾರದವರಲ್ಲವೆ ?

ಶ್ರೀ ಎಂ. ಎಚ್. ನಾಗನೂರ್.—ಕೇಂದ್ರ ಸರ್ಕಾರ ದವರು ಕೊಟ್ಟಿದ್ದ ಹಣವನ್ನು ನಾವು ಇದಕ್ಕಾಗಿ ಉಪ ಯೋಗ ಮಾಡಲಿಲ್ಲ. ಆದ್ದರಿಂದ ಸರ್ಕಾರದ ಬಡ್‌ಜೆಟ್ಟಿನಿಂದಲೇ ಇದನ್ನು ಕಟ್ಟಿಸಬೇಕೆಂದು ತಿರ್ಮಾನ ಮಾಡಿದ್ದೇವೆ.

ಶ್ರೀ ಎಂ. ಶಂಕರಯ್ಯ.—ಕೇಂದ್ರ ಸರ್ಕಾರದ ದುಡ್ಡನ್ನು ಅನ್ಯಾಯ ಮಾಡಿದಂತಾಗಲಿಲ್ಲವೇ ?

ಶ್ರೀ ಎಂ. ಎಚ್. ನಾಗನೂರ್.—ಯಾವ ದುಡ್ಡೂ ಈಗ ಉಳಿಸಿಲ್ಲ.

ಶ್ರೀ ಬಿ. ಜಿ. ಖೋತ್.—ಬಡ್‌ಜೆಟ್ಟಿನಲ್ಲಿ ಇದಕ್ಕೆ ಹಣ ಒದಗಿಸಿ ಅದನ್ನು ಖರ್ಚುಮಾಡುತ್ತೀರಲ್ಲವೇ ?

ಶ್ರೀ ಎಂ. ಎನ್. ನಾಗನೂರ್.—ಅದಕ್ಕಿಂತ ಹೆಚ್ಚಿಗೆ ಖರ್ಚು ಮಾಡುತ್ತೇವೆ.

Preparation of Budget Estimates Departmentwise and Districtwise.

*Q.—685. Sri B. G. KHOT (Sadalga).—

Will the Government be pleased to state :—

(*a*) whether Budget estimates would be made available both district-wise and departmentwise for the convenience and study of the members ;

(*b*) whether expenditure accounts will be kept on departmental basis instead of on service basis as it is done today ?

A.—Sri T. MARIAPPA (Minister for Finance).—

(*a*) It is not possible to prepare the Budget Estimates Districtwise. Excepting for a few heads of account, such as "47. Miscellaneous Departments and "57. Miscellaneous", the Budget Estimates are prepared mostly according to Departments. Under a few major heads, like "7. Land Revenue", "25. General Administration" and "54. Famine", Divisionwise provisions have been made.

(*b*) *Vide* reply to (*a*). Expenditure Accounts follow Budget Estimates.

Sri B. G. KHOT.—May I know the exact difficulties in making available districtwise budget estimates ?

† **Sri T. MARIAPPA.**—We do not prepare budget estimates districtwise. This form is prescribed throughout India and we have to follow a certain procedure.

Sri B. G. KHOT.—How are the budget estimates prepared and from whom are they received ?

Sri T. MARIAPPA.—They are received from the Heads of Departments.

Sri B. G. KHOT.—Do the Heads of Departments send up figures districtwise or divisionwise ?

Sri T. MARIAPPA.—In some districts there may be four schemes and in some district one scheme. All of them are forwarded to the Heads of Departments and they put the figures and send them on.

Dr. R. NAGAN GOWDA.—May I know whether it would not be possible for the Government to prepare a list of schemes for the years which are covered in the Plan ?

Sri T. MARIAPPA.—That question does not arise out of this.

Sri S. SHARANGOWDA.—Can you give districtwise proposals included in the Budget estimates for the year ?

ಶ್ರೀ ಟಿ. ಮರಿಯಪ್ಪ.—ಡಿಸ್ಟ್ರಿಕ್ಟ್‌ವೈಸ್ ಇರಬಹುದು ; ತಾಲ್ಲೂಕುವೈಸ್ ಇರಬಹುದು. ಆಯಾ ಡಿಪಾರ್ಟ್‌ಮೆಂಟುಗಳಲ್ಲಿ ಅದಿರುತ್ತದೆ. ಈಗ ಹೇಳುವುದಕ್ಕಾಗುವುದಿಲ್ಲ.

Sri J. B. MALLARADHYA.—Is it not a part of the scheme of national planning that planning should go down to the village level ? Where is the necessity for planning at Districtwise level ?

Sri T. MARIAPPA.—That is the very object why we have switched on to planning. But the question of preparing budget estimates is different from planning schemes.

Protected Water Supply to Hadagalli Taluk, Bellary District.

*Q.—693. **Sri M. M. PATEEL** (Hadagalli).—

Will the Government be pleased to state :—

(*a*) whether it has come to their notice that no village in Hadagalli Taluk, Bellary District, has been provided with protected water supply;

(*b*) if so, the reasons therefor ;

(*c*) whether they will take steps at least now to provide protected water supply to Hadagalli, Hagari Bommanahalli, Chintrapalli, and Ittigi Panchayat Villages ?

A.—**Sri T. SUBRAMANYA** (Minister for Law, Labour and Local Self-Government) —

(*a*) Yes.

(*b*) and (*c*) The question of providing protected water supply to the villages can be considered if the four villages fulfil the conditions laid down under the National Rural Water Supply and Sanitation Programme. Government have no information in this behalf at present, if they fulfil the conditions.

ಶ್ರೀ ಎಂ. ಎಂ. ಪಾಟೀಲ್.—(ಎ) ಪ್ರಶ್ನೆಗೆ ಉತ್ತರವಾಗಿ ಈ ನಾಲ್ಕು ಗ್ರಾಮಗಳಲ್ಲಿ ಯಾವುದನ್ನೂ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮಿನಲ್ಲಿ ಸೇರಿಕೊಂಡಿಲ್ಲವೆಂದು ಹೇಳಿದ್ದೀರಿ. ಇದಕ್ಕೆ ಕಾರಣವೇನೆಂದು ಕೇಳಿರುವುದಕ್ಕೆ ಈ ಗ್ರಾಮಗಳು ಅದಕ್ಕೆ ನಿಗದಿಯಾಗಿರುವ ಷರತ್ತುಗಳನ್ನು ಪೂರೈಸಿಲ್ಲವೆಂದು ಹೇಳಿದ್ದೀರಿ. ಸ್ಕೀಮಿನಲ್ಲಿ ಸೇರಿಯೇ ಇಲ್ಲದಿರುವಾಗ ಆ ಷರತ್ತುಗಳನ್ನು ಪೂರೈಸುವ ಪ್ರಶ್ನೆಯೆಲ್ಲಿದೆ ?

†ಶ್ರೀ ಟಿ. ಸುಬ್ರಹ್ಮಣ್ಯ.—ಈ ನಂದರ್ಭದಲ್ಲಿ ಇರುವ ಒಂದು ನಂಶಯವನ್ನು ನಾನು ನಿವಾರಣೆ ಮಾಡಬೇಕೆಂದಿದ್ದೇನೆ. ಮಾನ್ಯ ನದನ್ಯರು ಬಳ್ಳಾರಿಯ ನಾಲ್ಕು ಹಳ್ಳಿಗಳನ್ನು ಕೇಳಿದ್ದಾರೆ. ಆ ಹಳ್ಳಿಗಳು ಈ ಸ್ಕೀಮಿನಲ್ಲಿ ಸೇರಿಲ್ಲವೆಂದು ಹೇಳಿದ್ದೇನೆ ಅಷ್ಟೆ. ಇದರ ಷರತ್ತುಗಳ ಪ್ರಕಾರ 1500 ಪ್ರಜಾನಂಖ್ಯೆಗೆ ಕಮ್ಮಿ ಇರಬೇಕು. ಅಲ್ಲಿ ವಿದ್ಯುಚ್ಛಕ್ತಿ ಅನುಕೂಲತೆ ಇರಬೇಕು. ವಿಲೇಜ್ ಪಂಚಾಯತಿಯವರು ಕೇ. 25 ಭಾಗದಷ್ಟು ಹೊರೆಯನ್ನು ಹೊರಲು ಸಿದ್ಧವಾಗಿರಬೇಕು. ನೀವು ಹೇಳಿರುವ ಗ್ರಾಮಗಳ ಪೈಕಿ ಹಗರಿಬೊಮ್ಮನಹಳ್ಳಿ ಮಾತ್ರ ಈ ಶರತ್ತುಗಳನ್ನೆಲ್ಲಾ ಎನ್ಸರ್ ಮಾಡಬಲ್ಲದು. ಆ ಪಂಚಾಯತಿಯವರು ಈ ಬಗ್ಗೆ ಒಂದು ನಿರ್ಣಯ ಮಾಡಿ ಕಳುಹಿಸಿಕೊಟ್ಟರೆ ಯೋಚನೆ ಮಾಡುತ್ತೇವೆ.

ಶ್ರೀ ಎಂ. ಎಂ. ಪಾಟೀಲ್.—ಇಂಡಿಯಾ ನರ್ಕಾರದವರಿಗೆ ಶಿಫಾರನು ಮಾಡಿ ಕಳುಹಿಸಿದ್ದೇವೆ ಎಂದು ಹೇಳಿದಿರಿ. ಅವರಿಂದ ನಮ್ಮತಿಗೊಂಡು ಬಂದಮೇಲೆ ಹಡಗಲಿ ಹೆಡ್‌ಕ್ವಾರ್ಟರ್ಸ್‌ಗೆ ಜಾಗ್ರತೆ ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಸುಬ್ರಹ್ಮಣ್ಯ.—ನ್ಯಾಷನಲ್ ರೂರಲ್ ವಾಟರ್ ನಪ್ಲೈ ಸ್ಕೀಮಿನಲ್ಲಿ ಹಡಗಲಿ ಸೇರಿಲ್ಲ.

ಶ್ರೀ ಎಂ. ಎಂ. ಪಾಟೀಲ್.—ತಮ್ಮ ಸ್ಕೀಮಿನ ಪ್ರಕಾರ ಹಡಗಲಿಯನ್ನು ನರ್ವೆಗೆ ಕೊಟ್ಟಿರುವುದು ನಿಜವೇ ?